# ಜ್ಯೋತಿಸ್ಸಂತ ಜರತುಷ್ಟ್ರ

ಸ್ವಾಮಿ ವೀರೇಶಾನಂದ

*ಗ್ರೀಕ್ ಮತ್ತು ಈಜಿಪ್ಟ್ ಸಂಸ್ಕೃತಿಗಳಿಗೂ ಪ್ರಾಚೀನವಾದ, ದೂರದ ಕಾಲಘಟ್ಟದಲ್ಲಿ ಬೆಳಗಿದ ಜರತುಷ್ಟ್ರನೆಂಬ ಆ ಆಧ್ಯಾತ್ಮಿಕ ಜ್ಯೋತಿ ಇಂದಿಗೂ ಮಾನವ ಜನಾಂಗಕ್ಕೆ ದಾರಿ ತೋರಬಲ್ಲ, ಕರುಣಾಳುವಾದ ಬೆಳಕಾಗಿದೆ—ಎಂಬುದನ್ನು ನಿರೂಪಿಸಿರುವ ಸ್ವಾಮಿ ವೀರೇಶಾನಂದರು ವಿವೇಕಪ್ರಭ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.*

ಇದು ಗತಕಾಲದ ಮಾತು. ಕ್ರಿಸ್ತನಿಂದ ೫-೬ ಸಾವಿರ ವರ್ಷಗಳ ಹಿಂದಿನ ಕಥೆ. ಇಂದಿನ ಇರಾನ್ ಅಂದು ಪರ್ಷಿಯಾ ಎಂದು ಕರೆಸಿಕೊಂಡಿತ್ತು. ಅಲ್ಲಿ ಎರಡು ಪಂಗಡಗಳು. 'ಕವಿ-ಕರ್ಪಣ'ರೆಂಬ ಜನರ ಪಂಗಡ ದೊಡ್ಡದು. ಆದರೆ ಅವರ ಆಚಾರ, ವ್ಯವಹಾರಗಳು ಕೀಳು ಮಟ್ಟದ್ದು. ಅವರ ಚಾರಿತ್ರ್ಯ ಕಳಂಕಿತವಾದದ್ದು. ಅವರು ಹೊಂದಿದ್ದ ರಾಜಕೀಯ ಶಕ್ತಿಯೋ ಬರ್ಬರತೆಯ ಮತ್ತು ಕೆಡುಕಿನ ಆಸುರೀಶಕ್ತಿ. ಇನ್ನೊಂದು ಪಂಗಡ ಸಣ್ಣದು. ಆದರೆ ಅಲ್ಲಿನ ಜನ ನ್ಯಾಯಮಾರ್ಗಾವಲಂಬಿಗಳು ಧಾರ್ಮಿಕರು. ಆದರೆ ದನಿಯಿಲ್ಲದವರು. ಆಚಾರವಂತರು ಆದರೆ ತುಳಿಯಲ್ಪಟ್ಟವರು. ಆ ಪಂಗಡವೇ ಮಜ್‌ದ್ಯಾಸನಿ(ಮಜಡಾನ ಧರ್ಮ) ಎಂದು ಕರೆಯಲ್ಪಡುತ್ತಿದ್ದ 'ಮಘೂ' ಅಥವಾ 'ಮಘವಾ' ಪಂಗಡ. ಈ ಎರಡು ಪಂಗಡಗಳ ಸಂಘರ್ಷದ ಸಂಧಿಕಾಲದಲ್ಲಿ, ಮಬ್ಬುಗತ್ತಲೆಯ ನಡುವೆ ಜ್ಯೋತಿರೂಪನಾಗಿ ಆ ಕಾಲಮಾನದಲ್ಲಿ ಎದ್ದು ಬಂದ ಸಂತ-ಪ್ರವಾದಿ ಜರತುಷ್ಟ್ರ.

### ಜನನ ಮತ್ತು ಬಾಲ್ಯ

ಅಹುರಮಜಡಾ 'ಮಘೂ'ಗಳ ದೇವರು. ಅವನಲ್ಲಿ ಅವನ ಭಕ್ತರು ಪ್ರಾರ್ಥಿಸುತ್ತಿದ್ದರು, ದೂರುತ್ತಿದ್ದರು: "ಪ್ರಭು, ನಮ್ಮನ್ನು ಏಕೆ ತಾನೇ ಸೃಷ್ಟಿಸಿದೆ? ನಮ್ಮ ನಿಯಂತ್ರಕನು ಯಾರು? ನಮ್ಮ ಮೇಲೆ ಹೇರಲಾಗಿದೆ ಸಂಘರ್ಷ, ವಿನಾಶ, ಕಲಹ, ಕ್ರೋಧ ಮತ್ತು ದೌರ್ಜನ್ಯಗಳ ಸರಮಾಲೆ. ನೀನಲ್ಲದೆ ನಮ್ಮನ್ನು ರಕ್ಷಿಸುವವರು ಯಾರು? ಆದ್ದರಿಂದ ನಮಗೆ ಒಳ್ಳೆಯದಾಗುವಂತೆ ಮಾಡು." ಅದನ್ನು ಕರುಣಾಘನನಾದ ಅಹುರಮಜಡಾ ಕೇಳಿಸಿಕೊಂಡ. ತಾನೇ, ದಿವ್ಯಜ್ಯೋತಿಯಾಗಿ, ಭಕ್ತಯಾದ ದುಗ್ದೋವಾ ಎಂಬ ಕುಮಾರಿಯ ಗರ್ಭವನ್ನು ಪ್ರವೇಶಿಸಿದ. ದಿವ್ಯಜ್ಯೋತಿಯನ್ನೇ ಹೊತ್ತ ಆ ಕುವರಿಯ ಮುಖಮಂಡಲದಲ್ಲಿ ಅಪೂರ್ವ ಕಾಂತಿ ಸೂಸುತ್ತಿತ್ತು. ಇಡೀ ತನುವು ದಿವ್ಯ ಬೆಳಕಿನಿಂದ ತೊಯ್ದುಹೋದಂತೆ ಇತ್ತು. ಅವಳ ಇಂದ್ರಿಯಾತೀತ ರೂಪರಾಶಿಯನ್ನು ಕಂಡು ಬೆದರಿದ ಕೆಲವು ದುಷ್ಟಶಕ್ತಿಗಳು ಅವಳನ್ನು ಕೊಲ್ಲಲು ಹೋದವು. ಅವಳ ತಂದೆ ಅವ ಳನ್ನು ಸುರಕ್ಷಿತ ಸ್ಥಳವಾದ ಅಜೆರ್‌ಬೈಜಾನ್‌ಗೆ ಕಳಿಸಿದ. ಅಲ್ಲಿ ಅವಳು ಪೋರುಶಾಸ್ಪ್ ಎನ್ನುವವನೊಡನೆ ವಿವಾಹವಾದಳು. ಕಾಲಕ್ರಮೇಣ ಐದು ಮಕ್ಕಳಿಗೆ ತಾಯಿಯಾದಳು. ಅವರಲ್ಲಿ ಮೂರನೆಯ ಮಗನೇ ಜರತುಷ್ಟ್ರ. ಅವನನ್ನು, ಅವನ ಕುಟುಂಬದ ಹೆಸರು ಕೂಡಿಸಿ, 'ಸ್ಪಿಟಮ ಜರತುಷ್ಟ್ರ' ಎಂದೂ ಕರೆಯುವರು. ಇವನ ನಂತರ, ಈ ದೇವದೂತನ ಶಿಷ್ಯ ಪ್ರಶಿಷ್ಯರನ್ನು ಕೂಡ 'ಜರತುಷ್ಟ್ರ' ಎಂದೇ ಕರೆಯುವ ವಾಡಿಕೆ ಬೆಳೆದು ಬಂತು. ಈ ದಿವ್ಯಬಾಲಕನ ಜನ್ಮವೂ ದಿವ್ಯವೇ. ಅವನು ಹುಟ್ಟಿದೊಡನೆ ಬೆಳಕಿನ ರಾಶಿಯೊಂದು ಆ ಮನೆಯಲ್ಲಿ ತುಂಬಿಬಿಟ್ಟಿತು. ಆಕಾಶದಿಂದ ಹರ್ಷ ನಿನಾದಗಳು ಕೇಳಿಬಂದವು. ಮಗು ಹುಟ್ಟಿದಾಗ ಅಳುವ ಬದಲು ನಗುತ್ತಿತ್ತು.

ಈ ಬಾಲಕನ ಕೀರ್ತಿ ಇರಾನಿನಾದ್ಯಂತ ಹರಡಿತು. ಇವನ ಪ್ರಭಾವಕ್ಕಂಜಿದರು, ಆಳುವವರಾದ ಕವಿ-ಕರ್ಪಣರು. ಕೃಷ್ಣನ ಬಳಿಗೆ ಕಂಸ ವಧೆಕಾರರನ್ನು ಕಳಿಸಿದಂತೆ, ಅವರೂ ಈ ಮಗುವನ್ನು ಕೊಲ್ಲಲು ಅನೇಕ ಪ್ರಯತ್ನಗಳನ್ನು ಮಾಡಿದರು. ಅವರಲ್ಲಿ, ದುರಾಸ್ರಾಬೋ ಎನ್ನುವವನು ಕಠಾರಿಯಿಂದ ಮಗುವನ್ನು ತಿವಿಯುವುದರಲ್ಲಿದ್ದಾಗ, ಆ ಕಠಾರಿಯೇ ಡೊಂಕಾಗಿ ಹೋಯಿತಂತೆ. ಅಷ್ಟಕ್ಕೇ ಬಿಡದ ಅವನು ಮಗುವನ್ನು ಬೆಂಕಿಗೆ ಹಾಕಿದ. ಅಲ್ಲಿಂದ ಕೂಡ ಮಗು ಪವಾಡವೆಂಬಂತೆ ಪಾರಾಯಿತು. ನಂತರ ಯಾರೋ ಓಡಿಬರುತ್ತಿರುವ ದನಗಳ ಮುಂದೆ ಮಗುವನ್ನು ಎಸೆದರು. ಆಗ ಒಂದು ದೊಡ್ಡ ಹಸು ಮಗುವಿನ ರಕ್ಷಣೆಗೆ ನಿಂತಿತು. ಈ ದೇವದೂತನನ್ನು ಕೊಲ್ಲಲು ಮಾಡಿದ ಪ್ರಯತ್ನಗಳೆಲ್ಲ ಹೀಗೆ ವಿಫಲವಾಯಿತು. ಜರತುಷ್ಟ್ರನ ಏಳನೆಯ ವಯಸ್ಸಿನಲ್ಲಿ, ಇದೇ ತರಹದ ಪ್ರಯತ್ನಗಳು ಮತ್ತೆ ನಡೆದವು. ಈ ಬಾರಿ, ಆ ದುಷ್ಟ ದುರಸ್ರಾಬೋ ಅಂತಹ ಒಂದು ವಧೆಯ ಪ್ರಯತ್ನದಲ್ಲಿ ತಾನೇ ಭಯಂಕರ ಮರಣವನ್ನಪ್ಪಿದ.

ಜರತುಷ್ಟ್ರನ ಬಾಲ್ಯದ ಬಗ್ಗೆ ನಮಗೆ ಹೆಚ್ಚು ತಿಳಿಯದು. ಅವನು 'ಮಘವಾ' ಪಂಗಡದ ಸಮರ್ಥಗುರು ಬುರ್ಜಿನ್-ಕುರು ಎಂಬುವನ ಬಳಿ ವಿದ್ಯೆ ಕಲಿತ. ಬಹಳ ಚಿಕ್ಕಂದಿನಿಂದಲೇ ಉದಾರ ಹಾಗೂ ದಯಾಪೂರಿತ ಹೃದಯದವನಾಗಿ ದುರ್ಬಲರು ಮತ್ತು ಬಡವರ ಬಂಧುವಾಗಿ ಬೆಳೆದ. ಅವನಿಗೆ ಹದಿನೈದು ವರ್ಷ ವಯಸ್ಸಾದಾಗ, ಅವನ ಸಹೋದರರು ಆಸ್ತಿಯಲ್ಲಿ ಪಾಲು ಕೇಳಿದರು. ಆದರಲ್ಲಿ, ತನ್ನ ಪಾಲಾಗಿ ಜರತುಷ್ಟ್ರ ಆರಿಸಿಕೊಂಡಿದ್ದು, 'ಕುಷ್ಟಿ' ಎಂದು ಕರೆಯುವ ಪವಿತ್ರ ಜನಿವಾರದ ದಾರವನ್ನು ಮಾತ್ರ.

## ಭಗವತ್ ಸಾಕ್ಷಾತ್ಕಾರ

ನವಯುವಕ ಜರತುಷ್ಟ್ರನ ಮನಸ್ಸು ಭಗವದನ್ವೇಷಣೆಯತ್ತ ತಿರುಗಿತು. ಸತ್ಯ ಮತ್ತು ಧರ್ಮಗಳ ಅರ್ಥವನ್ನು ತಿಳಿಯುವ ಆಕಾಂಕ್ಷೆ ಉತ್ಕಟವಾಗುತ್ತ ಹೋಯಿತು. ತನ್ನ ೨೦ನೆಯ ವಯಸ್ಸಿನಲ್ಲಿ, ತನ್ನ ಜೀವನದ ಈ ಆದರ್ಶವನ್ನು ಸಾಕಾರಗೊಳಿಸಿಕೊಳ್ಳಲು ಜರತುಷ್ಟ್ರ ಗೃಹವನ್ನು ತ್ಯಜಿಸಿದ. ಏಕಾಂತವನ್ನು ಆಶ್ರಯಿಸಿ, ಧ್ಯಾನ-ಆಧ್ಯಾತ್ಮಿಕ ಸಾಧನೆಗಳಲ್ಲಿ ತಲ್ಲೀನನಾದ. ಅಹುರಮಜದಾ ಪ್ರಭುವಿಗಾಗಿ ಮತ್ತು ತನ್ನೊಳಗಿನ ಸತ್ಯದ ಅಭಿವ್ಯಕ್ತಿಗಾಗಿ ಹಾತೊರೆದ.

ಗ್ರೀಕ್ ತತ್ತ್ವಶಾಸ್ತ್ರಜ್ಞ ಪ್ಲೇಟೋವಿನ ಪ್ರಕಾರ ಜರತುಷ್ಟ್ರ ಏಳು ವರುಷಗಳ ಕಾಲ ಮೌನವ್ರತ ಆಚರಿಸಿದ. ಇನ್ನೊಬ್ಬ ಬರಹಗಾರ ಪ್ಲಿನಿಯ ಪ್ರಕಾರ, ಈ ದಿವ್ಯ ಸಂದೇಶವಾಹಕ ನಾಗರಿಕತೆಯ ಕುರುಹೂ ಇಲ್ಲದ ನಿಬಿಡ ನಿರ್ಜನ ಪ್ರದೇಶಗಳಲ್ಲಿ ಇಪ್ಪತ್ತು ವರ್ಷಗಳ ಕಾಲ, ಕೇವಲ 'ಚೀಸ್' (ಹಾಲು ಗಿಣ್ಣು) ತಿಂದುಕೊಂಡು ಅಲೆದಾಡಿದ. ಮತ್ತೆ ಕೆಲವು ಗ್ರೀಕ್ ಲೇಖಕರು ಹೇಳುತ್ತಾರೆ, ಜರತುಷ್ಟ್ರ ಉನ್ನತ ಪರ್ವತ ಶಿಖರದಲ್ಲಿ, ದಿವ್ಯಾಗ್ನಿಯಿಂದ ಕೊರೆದು ರಚಿಸಲ್ಪಟ್ಟ ಗುಹೆಯಲ್ಲಿ ಕುಳಿತು ಧ್ಯಾನ ಮಾಡಿದ ಎಂದು.

ಹೀಗೆ ಭಗವನ್ಮಯನಾಗಿ, ಜರತುಷ್ಟ್ರ ಹಲವು ವರ್ಷಗಳನ್ನು ಕಳೆದ. ಅಸೀಮ ಹೋರಾಟದಿಂದ ತನ್ನಲ್ಲಿನ ಸೀಮಿತ ವ್ಯಕ್ತಿತ್ವದ ಕಡೆಯ ಪರದೆಯನ್ನೂ ಕಿತ್ತು ಬಿಸುಟು, ಭಗವದ್ಭಾವದಲ್ಲಿ ಐಕ್ಯತೆಯನ್ನು ಕಂಡುಕೊಂಡ. ದಿವ್ಯ ಪ್ರವಾದಿಯಾಗಲು ಜನ್ಮವೆತ್ತಿದ ಆ ಮಹಾಪುರುಷನೆಡೆಗೆ ದೈವೀ ಕೃಪೆ ಹರಿದು ಬಂದು ದಿವ್ಯ ಅನುಭೂತಿಯನ್ನಿತ್ತಿತು. ತನ್ನ ಮೂವತ್ತನೆಯ ವಯಸ್ಸಿನಲ್ಲಿ ಅವನು, ದೇವದೂತನೊಬ್ಬ ತನ್ನನ್ನು ಅಹುರಮಜದಾ ಪ್ರಭುವಿನ ಬಳಿಗೆ ಕೊಂಡೊಯ್ಯುವ ಹಾಗೆ ದಿವ್ಯದರ್ಶನವನ್ನು ಕಂಡ. ಅಲ್ಲಿ ಅವನು ತನ್ನ ಮಹಾಕಾರ್ಯದ ಸಾಕ್ಷಾತ್ಕಾರ ಮಾಡಿಕೊಂಡ. ಅವನೀಗ ಭಗವಂತನ ಬಂಟ. ಅನ್ಯಾಯ ಕಂಟಕಗಳ ವಿರುದ್ಧ ಧರ್ಮ ಸಂಗ್ರಾಮವೆಸಗಲು, ಅದರ ಮೂಲಕ ಅಹುರಮಜದಾ ಪ್ರಭುವಿನ ದಿವ್ಯ ಸಾಮ್ರಾಜ್ಯವನ್ನು ಈ ಭುವಿಯಲ್ಲಿ ಸಂಸ್ಥಾಪಿಸಲು, ನೇಮಿಸಲ್ಪಟ್ಟ ನೇತಾರ. ಅಹುರಮಜದಾ ಪ್ರಭು ಅವನಿಗೆ ಹೀಗೆ ದಿವ್ಯ ಆಣತಿ ಇತ್ತ: *"ನನ್ನ ಮಾತುಗಳನ್ನು ಕೇಳಿದವನು, ನನ್ನ ದರ್ಶನವನ್ನು ಪಡೆದವನು ಯಾರಾದರೂ ಇದ್ದರೆ, ಅವನು ಕೇವಲ ಈ 'ಸ್ಪಿಟಮ ಜರತುಷ್ಟ್ರ' ಮಾತ್ರ. ಅವನು, ನನ್ನ ಮೂಲಕ, ಧರ್ಮವನ್ನು ಪ್ರಸಾರ ಮಾಡಲು, ಈ ಜಗತ್ತಿನಲ್ಲಿ, ನ್ಯಾಯಯುತವಾದ ಕರ್ತವ್ಯಸ್ಥಾಪನೆಗೆ ಕಟಿಬದ್ಧನಾಗಿದ್ದಾನೆ. ಅವನ ಈ ಮಹೋನ್ನತ ಧ್ಯೇಯದ ಸಲುವಾಗಿ, ಅವನಿಗೆ ನಾನು, ನಿರಂಕುಶ ಅಧಿಕಾರವನ್ನು ದಯಪಾಲಿಸಿದ್ದೇನೆ."* ಈ ಭಗವದಾಜ್ಞೆಯಾದ



*ಜ್ಯೋತಿಸ್ಸಂತ ಜರತುಷ್ಟ್ರ*

ವರ್ಷವನ್ನೇ ಪ್ರಾಚೀನ ಗ್ರಂಥಗಳು ಧರ್ಮದ ಅವತರಣದ ವರ್ಷ ಎಂದು ಕರೆದಿವೆ. ಇಲ್ಲಿಂದಲೇ, ಪಾರ್ಸಿಗಳ ಶಕ ಆರಂಭವಾಗುವುದು.

## ನಿಷ್ಫಲಯಾತ್ರೆ ಮತ್ತು ಮತ್ತಷ್ಟು ದಿವ್ಯದರ್ಶನಗಳು

ಪ್ರಭುವಿನ ಆಜ್ಞೆಯನ್ನು ಶಿರಸಾವಹಿಸಿ ಜರತುಷ್ಟ್ರ, ತಾನು ಸಾಕಾರಗೊಳಿಸಿಕೊಂಡ ಧರ್ಮವನ್ನು ಹರಡಲು, ಕಾಡು-ಮೇಡುಗಳನ್ನು ಬಿಟ್ಟು, ನಾಡು-ಹಳ್ಳಿಗಳಿಗೆ ಮರಳಿ ಬಂದ. ಆಶ್ಚರ್ಯವೆಂದರೆ, ಅಲ್ಲಿಂದ ಹತ್ತು ವರುಷಗಳ ಕಾಲ ಸತತವಾಗಿ ಅವನು ಬಹುಪ್ರಯತ್ನಪಟ್ಟರೂ ಭಾರತ, ಚೀನಾ, ತುರ್ಕಿಸ್ಥಾನವೇ ಮೊದಲಾದ ದೇಶ ವಿದೇಶಗಳನ್ನು ಸುತ್ತಿ ಬಳಲಿದರೂ, ಒಬ್ಬನೇ ಒಬ್ಬನೂ ಕೂಡ ಇವನ ದಿವ್ಯ ಸಂದೇಶದ ಕರೆಗೆ ಓಗೊಡಲಿಲ್ಲ, ಒಬ್ಬನೂ ಕೂಡಾ ಈ ನವ ಪಂಥದ ಅನುಯಾಯಿಯಾಗಲಿಲ್ಲ. ಇದಕ್ಕೆ ಕಾರಣ, ಜರತುಷ್ಟ್ರ ಜನಗಳ ಮಧ್ಯೆ ಒಬ್ಬನಾಗಿ, ವಿನೀತ ಭಾವದಿಂದ ಜನರ ಮನಸ್ಸುಗಳ ಪರಿವರ್ತನೆಗೆ ಪ್ರಯತ್ನಿಸಿದನೇ ಹೊರತು, ತಾನೊಬ್ಬ ದಿವ್ಯ ಮಾನವ ಎಂಬ ಹಿರಿಮೆ-ಗರಿಮೆಗಳನ್ನು ತೋರಿಸಲಿಲ್ಲ. ಈ ವ್ಯರ್ಥ ಯಾತ್ರೆಯ ಅವಧಿಯಲ್ಲಿ ಅವನು ಕಠೋರವಾದ ಅನುಭವಗಳನ್ನು ಹೊಂದಬೇಕಾಯಿತು. ಕೆಲವರು ಅವನನ್ನು ಜರಿದರು. ಮತ್ತೆ ಕೆಲವರು ಕೊಲ್ಲಲೂ ಮುಂದಾದರು. ಒಬ್ಬ ರಾಜನಂತೂ ಅವನನ್ನು ಸೆರೆಮನೆಗೆ ತಳ್ಳಿದ.

ಇವೆಲ್ಲ ಅಡ್ಡಿ ಆತಂಕಗಳಿಂದ ಪಾರಾಗಿ ಅಲೆಯುತ್ತಿದ್ದ ಆ ದಿವ್ಯ ಪುರುಷನ ಮನಸ್ಸನ್ನು ಸಾಂತ್ವನಗೊಳಿಸಲೋ ಎಂಬಂತೆ ದಿವ್ಯ ದರ್ಶನಗಳು ಆಗತೊಡಗಿದವು. ಅವುಗಳಲ್ಲಿ ಅವನ ಭವಿಷ್ಯದ ವಿಜಯದ ವೈಭವ ಕಾಣಬರುತ್ತಿತ್ತು. ಇವುಗಳಿಂದ ದಿವ್ಯೋನ್ಮತ್ತನಾದ ಜರತುಷ್ಟ್ರ. ಆ ಅತೀಂದ್ರಿಯ ಸ್ಥಿತಿಯಲ್ಲಿ ದೇವಸಾಮ್ರಾಜ್ಯದ ಹತ್ತು ಹಲವು ನೆಲೆಗಳ ಮತ್ತು ಅಲ್ಲಿನ ಜ್ಯೋತಿಃಪುಂಜರಾದ, ದಿವ್ಯ ಪುರುಷರ ದರ್ಶನಗಳನ್ನು ಅವನು ಪಡೆದುಕೊಂಡ. ಅವನ ಅಗಾಧ ಪ್ರಯತ್ನವು ಪರಾಕಾಷ್ಠೆಯನ್ನು ಮುಟ್ಟಿದ ಈ ಅವಧಿಯಲ್ಲಿಯೇ ಆ ಸಾಹಸದ ಫಲವು ದಕ್ಕುವ ಸುಸಮಯವೂ ಒದಗಿ ಬಂದಿತ್ತು. ದಿವ್ಯಾದೃಷ್ಟ(Destiny) ಅವನನ್ನು ಮತ್ತೆ ಇರಾನಿಗೆ ಮರಳಿ ಕರೆತಂದಿತು.

ಹತ್ತು ವರುಷಗಳ ವಿಫಲ ಪ್ರಯತ್ನಗಳ ನಂತರ ಪ್ರಪ್ರಥಮ ಬಾರಿಗೆ, ಜರತುಷ್ಟ್ರನ ಧರ್ಮವನ್ನು ಅಪ್ಪಿಕೊಂಡವನು ಬೇರಾರೂ ಅಲ್ಲ, ಅವನ ಸೋದರಮಾವನ ಮಗನಾದ ಮೈಧ್ಯೋಯಿ ಮಾಹೋಗ್ ಎಂಬಾತನೇ. ಅವನ ದೀಕ್ಷೆ ಬರಾನಾ ಅರಣ್ಯ ಪ್ರದೇಶಗಳಲ್ಲಿ ನಡೆಯಿತು. ಇಷ್ಟೆಲ್ಲ ಪ್ರಯತ್ನ ಪಟ್ಟರೂ, ತಾನು ಪಡೆದಿದ್ದು ಒಬ್ಬನೇ ಶಿಷ್ಯನೆಂಬ ದುಃಖದಿಂದ ಜರತುಷ್ಟ್ರ ತನ್ನ ಪ್ರಭು ಅಹುರಮಜಡಾನ ಮುಂದೆ ತೋಡಿ ಕೊಂಡ. ಆ ಪ್ರಭುವಾದರೋ ಅವನನ್ನು ಮತ್ತೂ ಮುನ್ನುಗ್ಗು ವಂತೆ ಹುರಿದುಂಬಿಸಿದ. ನವಚೇತನದಿಂದ, ನವಶಕ್ತಿಭರಿತನಾಗಿ ಜರತುಷ್ಟ್ರ ಮತ್ತೆರಡು ವರ್ಷಗಳ ಕಾಲ, ಕಷ್ಟಗಳ ಮಧ್ಯ ದಲ್ಲಿಯೇ ತನ್ನ ಧರ್ಮಪ್ರಸಾರ ಕಾರ್ಯವನ್ನು ಮುಂದು ವರೆಸಿದ.

### ನೂತನ ಧರ್ಮೋತ್ಥಾನ

ನಾವೀಗ ಜರತುಷ್ಟ್ರನನ್ನು ದೊರೆ ಗುಸ್ತುಸ್ಪ್‌ನ ಆಸ್ಥಾನದಲ್ಲಿ ಕಾಣುತ್ತೇವೆ. ಆಸ್ಥಾನಿಕರ ಮತ್ತು ಹೊಗಳುಭಟ್ಟರ ತೀವ್ರ ಪ್ರತಿ ರೋಧದ ನಡುವೆಯೂ, ರಾಜನ ಸಂದರ್ಶನವನ್ನು ಗಿಟ್ಟಿಸಿ ಕೊಂಡ ಜರತುಷ್ಟ್ರ. ರಾಜನಿಗೆ ತನ್ನ ಧರ್ಮವನ್ನು ಸೇರಲು ಮುಕ್ತ ಆಹ್ವಾನವನ್ನು ನೀಡಿದ. ರಾಜ ಮೂರು ದಿನಗಳ ಕಾಲ, ಈ ಪ್ರವಾದಿಯನ್ನು ಪರೀಕ್ಷಿಸಿದ. ಅವನ ಮೇಲೆ ಮೂವತ್ತು ಮೂರು ಪ್ರಶ್ನೆಗಳ ಸುರಿಮಳೆಯಾಯಿತು. ಅವೆಲ್ಲಕ್ಕೂ ಜರ ತುಷ್ಟ್ರ ಸಮಾಧಾನಕರ ಉತ್ತರವಿತ್ತ. ಅದಷ್ಟೇ ಅಲ್ಲ, ಪರೀಕ್ಷೆ ಯೆಂದು ಜರತುಷ್ಟ್ರನ ಮೇಲೆ ಕರಗಿದ ಸುಡು ಲೋಹವನ್ನು ಸುರಿಯಲಾಯಿತು. ಅದು ಅವನನ್ನು ಸುಡಲಿಲ್ಲ. ಅವನ ವಿರೋಧಿಗಳು ಬಗೆ ಬಗೆಯ ಮಾಟ-ಮಂತ್ರಗಳನ್ನು ಮಾಡಿ ದರು. ಪ್ರಯೋಜನವಾಗಲಿಲ್ಲ. ಗಾಯಕ್ಕೆ ಉಪ್ಪು ಸುರಿದಂತೆ, ರಾಜ ಆ ವಿರೋಧಿಗಳ ಕುಹಕ ಮಾತುಗಳನ್ನು ಕೇಳಿ ಅವನನ್ನು ಸೆರೆಯಲ್ಲಿಟ್ಟ.

ಅದೇ ಸಂದರ್ಭದಲ್ಲಿ ಅಶ್ವಸ್ಪರ್ಧೆಯಲ್ಲಿ ಪಾಲ್ಗೊಳ್ಳ ಬೇಕಾಗಿದ್ದ ರಾಜನ ಪ್ರೀತಿಪಾತ್ರವಾದ ಕಪ್ಪುಕುದುರೆ 'ಬೆಹ ಜಾದ್' ಅನಿರೀಕ್ಷಿತವಾಗಿ, ಕುಂಟಾಗಿ ಹೋಯಿತು. ಯಾವ ವೈದ್ಯರನ್ನು ಕರೆಸಿ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ. ಈ ಸುದ್ದಿ ಕಿವಿಯಿಂದ ಕಿವಿಗೆ ಹರಡಿ, ಸೆರೆಮನೆಯ ಏಕಾಂತ ಕೊಠಡಿಯಲ್ಲಿದ್ದ ಜರತುಷ್ಟ್ರನನ್ನೂ ಮುಟ್ಟಿತು. ಅವನು, ರಾಜನಿಗೆ ತಾನು ಕುದುರೆಯನ್ನು ಗುಣಗೊಳಿಸುವುದಾಗಿ ಹೇಳಿ ಕಳುಹಿಸಿದ. ರಾಜ ಒಡನೆ, ಜರತುಷ್ಟ್ರನನ್ನು ಸೆರೆಮನೆಯಿಂದ ಬಿಡಿಸಿ, ಅರಮನೆಗೆ ಬರಮಾಡಿಕೊಂಡ.

ಜರತುಷ್ಟ್ರ ಕುದುರೆಯನ್ನು ಗುಣಪಡಿಸಲು ನಾಲ್ಕು ಷರತ್ತು ಗಳನ್ನು ಹಾಕಿದ: 1. ರಾಜ ಅನ್ಯಾಯದ ಧರ್ಮ ತ್ಯಜಿಸಿ, ಸತ್ಯ, ಪಾವಿತ್ರ್ಯ ಮತ್ತು ನ್ಯಾಯಯುತವಾದ ಅಹುರಮಜಡಾನ ಧರ್ಮವನ್ನು ಅಪ್ಪಬೇಕು. 2. ರಾಜನನ್ನು ಅನುಸರಿಸಿ ರಾಣಿಯೂ ಈ ನೂತನ ಧರ್ಮಕ್ಕೆ ಸೇರಿಕೊಳ್ಳಬೇಕು. 3. ದೊರೆಯ ಕುವರ ಅಸ್ಫಾಂದಿರ್ ಧರ್ಮಯುದ್ಧಕ್ಕೆಯುವ ರಾಜ ಸೈನ್ಯದ ಅಧಿಪತ್ಯವನ್ನು ವಹಿಸಿಕೊಳ್ಳಬೇಕು. 4. ಭ್ರಷ್ಟಾಚಾರ ಮತ್ತು ವಾಮಾಚಾರಗಳಲ್ಲಿ ತೊಡಗಿರುವ ದುಷ್ಟರನ್ನು ವಿಚಾ ರಣೆಗೆ ಒಳಪಡಿಸಿ ಶಿಕ್ಷಿಸಬೇಕು. ರಾಜ ಈ ಷರತ್ತುಗಳಿಗೆ ಒಪ್ಪಿದ. ರಾಜನ ಕುದುರೆ ಜರತುಷ್ಟ್ರನ ಪ್ರಾರ್ಥನೆಯ ಫಲವಾಗಿ ಎದ್ದು ನಿಂತಿತು. ನೂತನ ಧರ್ಮವನ್ನು ಒಪ್ಪಿಕೊಳ್ಳುವ ಮೊದಲು, ರಾಜ ದಿವ್ಯದರ್ಶನವೊಂದನ್ನು ಹೊಂದಲು ಬಯ ಸಿದ. ಅದರಂತೆ ದಿವ್ಯಸಂದೇಶವಾಹಕರು ತಮ್ಮ ಬೆಳಕಿನ ಶರೀರ ಗಳ ಮೂಲಕ ಕಾಣಿಸಿಕೊಂಡು, ರಾಜನಿಗೆ ಜರತುಷ್ಟ್ರನ ಧರ್ಮ ವನ್ನು ಅನುಸರಿಸುವಂತೆ ಹೇಳಿದರು. ತಾವು ಪ್ರಭು ಅಹುರ ಮಜಡಾನ ಆಣತಿಯಿಂದಲೇ ಇಲ್ಲಿಗೆ ಬಂದೆವೆಂದೂ, ಜರ ತುಷ್ಟ್ರ ಆ ಪ್ರಭುವಿನ ದಿವ್ಯದೂತನೆಂಬುವುದರಲ್ಲಿ ಯಾವ ಸಂದೇಹವನ್ನೂ ಪಡಬೇಕಾದ್ದಿಲ್ಲವೆಂದೂ ಆಶ್ವಾಸನೆ ಇತ್ತರು. ಇದರಿಂದ ಸಂತೃಪ್ತನಾದ ದೊರೆ, ಸಂತೋಷದಿಂದ ಈ ನವ ಪಂಥವನ್ನಪ್ಪಿಕೊಂಡ. ಈ ದಿವ್ಯಪ್ರಸಂಗದಿಂದ ನೂತನ ಧರ್ಮದ ಉತ್ಥಾನದ ಯುಗವೂ ಆರಂಭವಾಯಿತು.

### ತತ್ತ್ವ- ಉಪದೇಶ

ಈ ನವ ಪಂಥದ ಪವಿತ್ರ ಗ್ರಂಥವೆಂದರೆ 'ಅವೆಸ್ತಾ'ಗಳು. ನಂತರ ಅವುಗಳಿಗೆ 'ಜೆಂಡ್-ಅವೆಸ್ತಾ' ಎಂಬ ಹೆಸರು ಬಂತು. ಇವುಗಳಲ್ಲಿ, ಜರತುಷ್ಟ್ರನಿಗೆ ಭಗವಂತ ಕರುಣಿಸಿದ ಉಪ ದೇಶಾಮೃತಗಳ ಬೃಹದ್ ಸಂಗ್ರಹವೇ ಇದೆ. ಕಾಲಾಂತರದಲ್ಲಿ, ಬಹಳಷ್ಟು ಭಾಗಗಳು ನಷ್ಟವಾದರೂ, ಈಗಿನ ತನಕ ಉಳಿದು ಬಂದಿರುವ ಗ್ರಂಥರಾಶಿ ಅಲ್ಪ ಪ್ರಮಾಣದ್ದೇನೂ ಅಲ್ಲ.

1. ಜರತುಷ್ಟ್ರನ ಉಪದೇಶಗಳ ಪ್ರಕಾರ ಅಹುರ-ಮಜಡಾ ಒಬ್ಬನೇ ಈ ವಿಶ್ವದ ಏಕಮಾತ್ರ ಪರಮೇಶ್ವರನಾಗಿದ್ದಾನೆ. ಬಹು ದೇವತೆಗಳನ್ನು ಅರ್ಚಿಸುವುದು ಅವನ ದೃಷ್ಟಿಯಲ್ಲಿ

ವ್ಯಭಿಚಾರ. ಆ ರೀತಿಯ ತಪ್ಪು ಆಚಾರ ಅಜ್ಞಾನದ ಅಂಧಕಾರಕ್ಕೆ ಒಬ್ಬನನ್ನು ನೂಕಿಬಿಡುತ್ತದೆ. ಅಹುರಮಜಡಾ ಈ ಎಲ್ಲ ಭೌತಿಕ ಜಗತ್ತಿನ ಸೃಷ್ಟಿಕರ್ತ. ಅವನೇ, ತನ್ನ ಸೃಷ್ಟಿಯ ಒಳಗೂ ಹೊರಗೂ ಓತಪ್ರೋತನಾಗಿ ಇದ್ದಾನೆ. ಎಲ್ಲರ ರಕ್ಷಕ ಅವನು. ಕರ್ಮಫಲದಾತ ಅವನು. ಅವನನ್ನು ಕೇವಲ ಪೂಜಿಸುವುದಷ್ಟೇ ಅಲ್ಲ, ನಿಸ್ವಾರ್ಥ ಹಾಗೂ ನಿರ್ನಿಮಿತ್ತ ಪ್ರೇಮಭಕ್ತಿಗಳಿಂದ ಆರಾಧಿಸಬೇಕು. ಆತನ ಅಸೀಮ ದಯಾನುಕಂಪೆಗಳಿಗಾಗಿ ಆತನಿಗೆ ಅಹರ್ನಿಶ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕು.

2. ಐಕಾಂತಿಕ ಪ್ರೀತಿ-ಭಕ್ತಿಗಳಿಂದ ಅಹುರಮಜಡಾ ಪ್ರಭುವಿನ ನಿರಂತರ ಸ್ಮರಣೆ ಮಾಡಬೇಕು. ಅವನ ಪವಿತ್ರನಾಮವನ್ನು ಕೇವಲ ತುಟಿಗಳಿಂದ ಉಚ್ಚರಿಸುವುದಷ್ಟೇ ಅಲ್ಲ, ಪ್ರೇಮ ಮತ್ತು ಭಕ್ತಿಪೂರಿತ ಹೃದಯ ಹಾಗೂ, ಏಕಾಗ್ರಚಿತ್ತದಿಂದ ಮನನ ಮಾಡುವುದು ಆಧ್ಯಾತ್ಮಿಕ ಸಾಧನೆಯ ಮುಖ್ಯ ಅಂಗವಾಗಿದೆ. ಅಹುರಮಜಡಾನನ್ನು ಈ ಸೃಷ್ಟಿಯ ನಾನಾ ರೂಪಗಳಲ್ಲಿ ಆರಾಧಿಸಿರಿ ಎಂದು ಜರತುಷ್ಟ್ರ ತನ್ನ ಅನುಯಾಯಿಗಳಿಗೆ ಕರೆಯಿತ್ತಿರುವನು. ಸ್ವರ್ಗ, ದಿವ್ಯ ಲೋಕಗಳಲ್ಲಿ, ಭೌತಿಕ ಸೃಷ್ಟಿಗಳಾದ ಸೂರ್ಯ, ಚಂದ್ರ, ಅಗ್ನಿ, ಜಲ ಮುಂತಾದುವುಗಳಲ್ಲಿ ಆ ದಿವ್ಯಪ್ರಭುವಿನ ನಿರಂತರ ಅರ್ಚನೆ ನಡೆಯಲಿ ಎನ್ನುವುದು ಅವನ ಆಶಯ.

3. ಯಾವುದನ್ನೇ ಆಗಲಿ ತಾನು ಉಪದೇಶಿಸಿದ್ದರಿಂದ ಸತ್ಯ ಎಂದು ಬಗೆಯದಿರಿ, ನಿಮ್ಮ ಮನಸ್ಸಿನಲ್ಲಿ ಸಾಕ್ಷಾತ್ಕರಿಸಿಕೊಳ್ಳಿ ಎಂದು ಜರತುಷ್ಟ್ರ ಕರೆ ಕೊಡುತ್ತಾನೆ. ನಿಜವಾದ ಧರ್ಮ ಇರುವುದು ಪರಮ ಸತ್ಯದ ಆವಿಷ್ಕಾರದಲ್ಲಿ ಮಾತ್ರ, ಕೇವಲ ಆಚರಣೆಗಳಲ್ಲಿ ಅಲ್ಲ. ಆಂತರಿಕ ದರ್ಶನದಿಂದ ಮಾತ್ರವೇ ನಿಜವಾದ ಮತ್ತು ಪ್ರಯೋಜನಕಾರಿಯಾದ ಧರ್ಮದ ಆಚರಣೆ ಸಾಧ್ಯ. ಸತ್ಯ ಪ್ರತಿಯೊಬ್ಬರ ಜನ್ಮಸಿದ್ಧ ಹಕ್ಕು. ಆದರೆ ಅದು ಅಭಿವ್ಯಕ್ತಗೊಳ್ಳುವುದು ನಿಷ್ಠಾವಂತನಾದ ಸಾಧಕನ ಹೃದಯದಲ್ಲಿ. ಜರತುಷ್ಟ್ರ, ಬೌದ್ಧಿಕ ಜ್ಞಾನದ ಜೊತೆಜೊತೆಗೆ, ಪಾರಮಾರ್ಥಿಕ ಹಾಗೂ ಲೌಕಿಕ ಶಿಕ್ಷಣಕ್ಕೂ ಬಹಳ ಒತ್ತು ಕೊಡುತ್ತಿದ್ದ. ಆತ್ಮನ ವಿಕಾಸಕ್ಕೆ ಅವನು ಪ್ರಮುಖ ಸ್ಥಾನ ನೀಡಿದ್ದ.

4. ಸಚ್ಚಿಂತನ, ಸದ್ವಚನ ಮತ್ತು ಸತ್ಕರ್ಮಗಳ ಆಚರಣೆಗೆ ಪ್ರಾಶಸ್ತ್ಯವಿತ್ತು ಜರತುಷ್ಟ್ರನ ಈ ನವೀನ ಧರ್ಮದಲ್ಲಿ. ಪರಿಶುದ್ಧ ಹೃದಯದಿಂದ ಮತ್ತು ಭಕ್ತಿಭಾವದಿಂದ ನಿಮ್ಮೆಲ್ಲ ಕರ್ಮಗಳನ್ನು ಭಗವದರ್ಪಣ ಮಾಡಿ. ಈ ಕರ್ಮಮಾರ್ಗದಲ್ಲಿ ನಿಮ್ಮ ನೆರೆಯವರ ಸಹೋದರರ ಸೇವೆ ಮಾಡಿ. ಇದರಿಂದ ಅಹುರಮಜಡಾ ಪ್ರಭುವು ಸುಪ್ರೀತನಾಗುವನು. ಆತನ ಕೃಪೆಗೆ ಪಾತ್ರರಾಗಬೇಕಾಗುವ ಸುಲಭ ಉಪಾಯವೆಂದರೆ, ದೀನ-ದಲಿತರ ಸೇವೆ ಮಾಡುವುದು. ಹೀಗೆ, ಜರತುಷ್ಟ್ರ ಸೇವಾಯೋಗದ ಅಪೂರ್ವ ಆದರ್ಶವನ್ನು ನಮ್ಮ ಮುಂದೆ ಇಡುತ್ತಾನೆ.

5. ಜರತುಷ್ಟ್ರ ಬೋಧಿಸಿದ ತತ್ತ್ವಜಿಜ್ಞಾಸೆ ಒಂದು ಬಗೆಯ ದ್ವೈತವಾದ. ಈ ಪ್ರಪಂಚ ಸೃಷ್ಟಿಯಾಗಿರುವುದು ದ್ವಂದ್ವ ತತ್ತ್ವಗಳಿಂದ. ಈ ಪ್ರಪಂಚವಿರುವವರೆಗೂ ಆ ತತ್ತ್ವಗಳೂ ಇರುತ್ತವೆ. ಸೃಷ್ಟಿಯ ಅಂತ್ಯದಲ್ಲಿ ಅವು ದ್ವಂದ್ವಗಳಾಗಿ ಉಳಿಯದೆ, ಏಕೀಭಾವ ಹೊಂದುತ್ತವೆ. ಆ ಎರಡು ತತ್ತ್ವಗಳೆಂದರೆ ಸ್ಪೆಂಟಾಮೈನ್ಯೂ ಮತ್ತು ಅಂಗ್ರೆಮೈನ್ಯು. ಇದು ಕ್ರಿಶ್ಚಿಯನ್ನರ ಪವಿತ್ರಭೂತ ಮತ್ತು ಸೈತಾನರ ಕಲ್ಪನೆಗಳಿಗೆ ಭವಿಷ್ಯಕಾಲದಲ್ಲಿ ಅನುವು ಮಾಡಿಕೊಟ್ಟಿರಬಹುದು.

6. ಸ್ಪೆಂಟಾಮೈನ್ಯೂ, ದೈವೀಗುಣಗಳನ್ನು ಉತ್ತೇಜಿಸುವ ಮತ್ತು ದಿವ್ಯಾತ್ಮ ಐಕ್ಯತೆಯೆಡೆಗೆ ಕೊಂಡೊಯ್ಯುವ ತತ್ತ್ವ. ಅಂಗ್ರೆಮೈನ್ಯು ಆ ದೈವೀಗುಣಗಳಿಂದ ದೂರಸರಿಸಿ, ಆಸುರೀ ಗುಣಗಳನ್ನು ಉತ್ತೇಜಿಸಿ, ದಿವ್ಯಾತ್ಮ ಐಕ್ಯತೆಯಿಂದ ಮನುಷ್ಯನನ್ನು ವಿಮುಖ ಮಾಡುವ ಆಸುರೀ ಶಕ್ತಿ. ಇದು ಸಮಷ್ಟಿಯ ದಿವ್ಯ ಏಕತೆಯತ್ತ ಮೇಲೇರುತ್ತಿದ್ದ ಅಂತರಾತ್ಮನನ್ನು ವ್ಯಷ್ಟಿಯ ಖಂಡ ವ್ಯಕ್ತಿತ್ವದ ಅಜ್ಞಾನಾಂಧ ಕೂಪದಲ್ಲಿ ಕೆಳಗೆಳೆದು ನೂಕುವುದು. ಇದು ಮಾನವನಲ್ಲಿ ಅಹಂಕಾರವನ್ನೂ, ದ್ವೇಷ ಅಸೂಯೆಗಳನ್ನೂ ಉಂಟು ಮಾಡುವುದು, ಭಗವದ್ವಿಮುಖನನ್ನಾಗಿ ಮಾಡುವುದು. ಸ್ಪೆಂಟಾಮೈನ್ಯುವಿನಿಂದ ಒಡಮೂಡಿದ ಸಚ್ಚಿಂತನೆಗಳು, ಒಳ್ಳೆಯ ಮಾತುಗಳು ಮತ್ತು ಸತ್ಕಾರ್ಯಗಳಾದರೋ, ಭಗವನ್ಮುಖನನ್ನಾಗಿ ಮಾಡುವುವು. ಪ್ರತಿಯೊಬ್ಬ ವ್ಯಕ್ತಿಗೂ ಇವೆರಡಲ್ಲಿ ಒಂದನ್ನು ಆರಿಸಿಕೊಳ್ಳುವ ಅವಕಾಶವನ್ನು ಭಗವಂತ ಕಲ್ಪಿಸಿಕೊಟ್ಟಿದ್ದಾನೆ. ಯಾವಾಗ ಈ ದೈವೀ ಮತ್ತು ಆಸುರೀ ಶಕ್ತಿಗಳ ಪರಿಜ್ಞಾನ ಉಂಟಾಗುವುದೋ ಆಗ ಮನುಷ್ಯ ತನ್ನ ಬದುಕಿನ ನಿಜವಾದ ಧ್ಯೇಯವನ್ನು ಕಂಡುಕೊಂಡು, ಯಶಸ್ಸಿನ ಮಾರ್ಗದಲ್ಲಿ ಮುಂದುವರೆಯುತ್ತಾನೆ.

## ನೂತನ ಧರ್ಮದ ಪ್ರಸಾರ

ರಾಜಾ ಗುಸ್ತುಸ್ಪ ಧರ್ಮಯುದ್ಧಗಳಲ್ಲಿ ವಿರೋಧಿಗಳನ್ನು ಬಗ್ಗುಬಡಿದು, ಇರಾನಿನ ಬಹುತೇಕ ಪ್ರದೇಶದಲ್ಲಿ ಧರ್ಮಸಾಮ್ರಾಜ್ಯವನ್ನು ಸ್ಥಾಪಿಸಿದನು. ರಾಜನ ದೊಡ್ಡ ಸಂಸಾರದಲ್ಲಿದ್ದ, ಅವನ ಹಲವು ಪುತ್ರರು ಈ ಧರ್ಮಯುದ್ಧಗಳಲ್ಲಿ ಹತರಾದರು. ಆದರೆ, ಕೊನೆಯ ತನಕ ಉಳಿದುಕೊಂಡವನೆಂದರೆ, ವೀರಾಧಿವೀರನೆನೆಸಿಕೊಂಡ ಅಸ್ಫಾಂದಿರ್ ಎನ್ನುವವನು. ನೂತನ ಧರ್ಮ ಪ್ರಸಾರದಲ್ಲಿ ಇವನ ಕೊಡುಗೆ ಅಪಾರ.

ಈ ಸಂದರ್ಭದಲ್ಲಿ ಜರತುಷ್ಟ್ರ ನಾಡಿನ ಉದ್ದಗಲಕ್ಕೂ ಸಂಚರಿಸಿ, ತನ್ನ ಉಪದೇಶಾಮೃತ ಪ್ರೇಮವಾರಿಧಿಯನ್ನು ಎಲ್ಲರಿಗೂ ಉಣಬಡಿಸಿದ. ದೀನದಲಿತರ ಸೇವೆಗಾಗಿ ಕಟಿಬದ್ಧನಾಗಿ ನಿಂತ. ತನ್ನ ೪೫ ವಯಸ್ಸಿನಿಂದ ಹಿಡಿದು ೭೦ನೆಯ ವಯಸ್ಸಿನವರೆಗೂ, ಹೀಗೆ ಧರ್ಮಪ್ರಸಾರದ ಪವಿತ್ರಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡ. ಜರತುಷ್ಟ್ರ ಔಷಧಿಶಾಸ್ತ್ರದಲ್ಲಿಯೂ ಪ್ರವೀಣನಾಗಿದ್ದ. ತನ್ನ ಕೌಶಲದಿಂದ ಅನೇಕ ಜನ ರೋಗಿಗಳನ್ನು ಗುಣಮಾಡಿದ.

ಜರತುಷ್ಟ್ರ ವಿದ್ವತ್ತಿಗೆ ಬಹಳ ಪ್ರಾಮುಖ್ಯ ಕೊಡುತ್ತಿದ್ದ. ಆಧ್ಯಾತ್ಮಿಕ ಜ್ಞಾನದ ಜೊತೆಗೆ, ಲೌಕಿಕ ಜ್ಞಾನದ ಪಾಂಡಿತ್ಯವೂ ಕೂಡ ಆತನ ಶಿಷ್ಯರಿಗೆ ಆವಶ್ಯಕವಾಗಿತ್ತು. ಅವನ ಆದರ್ಶ ದೇಹ, ಮನಸ್ಸು, ಮತ್ತು ಆತ್ಮಗಳ ಸರ್ವತೋಮುಖ ಬೆಳವಣಿಗೆಯೇ ಆಗಿತ್ತು. ತನ್ನ ಶಿಷ್ಯರನ್ನು ಆ ನಿಟ್ಟಿನಲ್ಲಿ ಕಠಿಣ ತರಬೇತಿಗೆ ಒಳಪಡಿಸಿದ. ಜರತುಷ್ಟ್ರ ಉಪದೇಶಿಸಿದ ಜ್ಞಾನರಾಶಿ, ಎಷ್ಟು ಅಗಾಧವಾಗಿತ್ತೆಂದರೆ, ಅದನ್ನು ಚರ್ಮದ ಮೇಲೆ ಬರೆದುಕೊಳ್ಳಲು ಶಿಷ್ಯರಿಗೆ ೧೨,೦೦೦ ಹಸುಗಳ ಚರ್ಮ ಬೇಕಾಯಿತಂತೆ. ಆ ಜ್ಞಾನಭಂಡಾರವನ್ನು ರಾಜ ಗುಸ್ಟುಸ್ಪ ಒಂದು ದೊಡ್ಡ ಗ್ರಂಥಾಲಯವನ್ನು ಕಟ್ಟಿಸಿ ಅಲ್ಲಿ ಇರಿಸಿದ.

ಈ ನೂತನ ಧರ್ಮದ ದೇವಾಲಯಗಳಲ್ಲಿ ಅರ್ಚಿಸುತ್ತಿದ್ದುದು ಕೇವಲ ಪವಿತ್ರಾಗ್ನಿಯನ್ನು. ಅವುಗಳನ್ನು ಅಟಶ್ ಖಾನಾ ಎಂದು ಕರೆಯುತ್ತಾರೆ. ಜರತುಷ್ಟ್ರನ ಕಾಲದಲ್ಲಿಯೆ, ೧೦ ವಿವಿಧ ಸ್ಥಳದಲ್ಲಿ ಅಂತಹ ದೇವಮಂದಿರಗಳು ಇದ್ದವೆಂದು ಹೇಳಲಾಗಿದೆ.

## ಮಹಾತ್ಮನ ಪ್ರಾಣಾಹುತಿ

ಅಸ್ಪಾಂದಿರ್ ಧರ್ಮಪ್ರಸಾರದಲ್ಲಿ ತೊಡಗಿದ. ವಿದೇಶಗಳಲ್ಲಿ ಧರ್ಮಸಂದೇಶಪ್ರಸಾರವನ್ನು ಮಾಡುತ್ತ, ಆ ನಾಡುಗಳಲ್ಲಿಯೇ ಬಹಳ ಕಾಲ ಕಳೆದ. ಈ ಮಧ್ಯೆ, ಅವನ ಸಹೋದರ ಕುರ್ಜಮ್ ಎನ್ನುವವನು ಅಸ್ಪಾಂದಿರ್‌ನ ಮೇಲೆ ಇಲ್ಲಸಲ್ಲದ ಚಾಡಿ ಮಾತುಗಳನ್ನು ತನ್ನ ತಂದೆಯ ಕಿವಿಯಲ್ಲಿ ಊದಿದ. ತನ್ನ ಯಶಸ್ವೀ ಅಭಿಯಾನವನ್ನು ಸಂಪೂರ್ಣಗೊಳಿಸಿ ಇರಾನಿಗೆ ಮರಳಿ ಬಂದ ಅಸ್ಪಾಂದಿರ್‌ಗೆ ಕಾದಿತ್ತು ತನ್ನ ಪ್ರೀತಿಪಾತ್ರ ತಂದೆಯ ಸೆರೆಮನೆ. ಈ ಸನ್ನಿವೇಶದ ಲಾಭಪಡೆದು ಶತ್ರುರಾಜ ಅರ್‌ಜಸ್ಪ್ ಏಕಾಏಕಿ ದಾಳಿ ಮಾಡಿದ. ರಾಜ ಗುಸ್ಟುಸ್ಪನ ತಂದೆ ಲೋಹ್ರಾಸ್ಪ್, ಬಾಲ್ಕ್ ಎಂಬಲ್ಲಿ ತನ್ನ ಕಡೆಯ ದಿನಗಳನ್ನು ಧ್ಯಾನ ಪ್ರಾರ್ಥನೆಗಳಲ್ಲಿ ಕಳೆಯುತ್ತಿದ್ದ. ದಾಳಿಕೋರರು ಅವನನ್ನು ಅಮಾನುಷವಾಗಿ ಕೊಂದರು. ಅಲ್ಲಿನ ಪವಿತ್ರ ದೇವಮಂದಿರವನ್ನು ಅಗ್ನಿಗೆ ಆಹುತಿಯಿತ್ತರು. ಅಲ್ಲಿದ್ದ ಪುರೋಹಿತರನ್ನೆಲ್ಲ ನಿರ್ನಾಮ ಮಾಡಿದರು. ಆ ದೇವಮಂದಿರದಲ್ಲಿಯೇ ಮಹಾತ್ಮ ಜರತುಷ್ಟ್ರ ಪವಿತ್ರಾಗ್ನಿಯ ಎದುರು ಮಂಡಿಯೂರಿ ಕುಳಿತು ಪ್ರಾರ್ಥನೆ ಸಲ್ಲಿಸುತ್ತಿದ್ದ. ಹಿಂದಿನಿಂದ ಬಂದ ದಾಳಿಕೋರನೊಬ್ಬ ಅವನ ಬೆನ್ನನ್ನು ಕಠಾರಿಯಿಂದ ತಿವಿದ. ಮಹಾತ್ಮ ಜರತುಷ್ಟ್ರ ಹೀಗೆ ಹುತಾತ್ಮನಾದ. ೭೭ ವರ್ಷ ಮತ್ತು ೪೦ ದಿನಗಳ ದಿವ್ಯ ಜೀವನವನ್ನು ಬಾಳಿ, ಭಗವಂತನ ಪಾದದಡಿಯಲ್ಲಿ ತನ್ನ ಪ್ರಾಣವನ್ನು ಸಮರ್ಪಣೆ ಮಾಡಿಬಿಟ್ಟ.

ಗುಸ್ಟುಸ್ಪನಿಗೆ ಈ ವಾರ್ತೆಯನ್ನು ಕೇಳಿ ಬಹಳ ದುಃಖವಾಯಿತು. ತನ್ನ ತಪ್ಪಿನ ಅರಿವಾಯಿತು. ಅವನು ತನ್ನ ಮಗ ಅಸ್ಪಾಂದಿರ್‌ನನ್ನು ತಾನೇ ಸ್ವತಃ ಸೆರೆಯಿಂದ ಬಿಡಿಸಿದ. ಪುತ್ರನ ಕ್ಷಮೆ ಕೇಳಿದ. ಧರ್ಮಭೀರುವಾದ ಅಸ್ಪಾಂದಿರ್ ಮತ್ತೊಮ್ಮೆ ಧರ್ಮಯುದ್ಧಕ್ಕೆ ಧುಮುಕಿದ. ಸೇನೆಯನ್ನು ಒಗ್ಗೂಡಿಸಿ, ವೈರಿಗಳ ಮೇಲೆ ಬಿದ್ದ. ಛಲದಿಂದ ಕಾದು, ಶತ್ರುಗಳನ್ನು ಸದೆಬಡೆದ. ಅರ್‌ಜಸ್ಪ್‌ನನ್ನು ಈ ಬಾರಿ ಉಳಿಸಲಿಲ್ಲ. ಬೆನ್ನಟ್ಟಿ ಹೋಗಿ ವಧೆ ಮಾಡಿದ. ಧರ್ಮಪತಾಕೆಯನ್ನು ಹಾರಿಸಿದ.

ಇರಾನಿನ ಈ ಧರ್ಮ ಸಂಸ್ಕೃತಿಗಳು ಏಳನೆಯ ಶತಮಾನದಲ್ಲಿ ಅರಬರ ದಾಳಿಯ ತನಕ ಉಳಿದು ಬೆಳೆದು ಬಂದವು. ನಂತರವೂ ಅನೇಕ ಸಂತ ಮಹಾತ್ಮರ ಮೂಲಕ ಧರ್ಮ ಉಳಿಯಿತು. ಗಾಥೆಗಳೆಂಬ ಪವಿತ್ರ ಗ್ರಂಥಗಳ ಮೂಲಕ ಇಂದಿಗೂ ಜರತುಷ್ಟ್ರನ ಉಪದೇಶ ವಾಣಿಗಳು ನಮಗೆ ಹರಿದು ಬಂದಿವೆ. ಭಾರತಕ್ಕೆ ವಲಸೆ ಬಂದಿರುವ ಪಾರ್ಸಿ ಜನಾಂಗ ತನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಪತ್ತನ್ನು ರಕ್ಷಿಸಿಕೊಂಡು ಬಂದಿದೆ. ಪಾರ್ಸಿಧರ್ಮವೆಂದು ಕರೆಯಲ್ಪಡುವ ಈ ಧರ್ಮವು ಭಾರತದಲ್ಲಿ ಇಂದಿಗೂ ಪ್ರಚಲಿತವಿದೆ.

ಗ್ರೀಕ್ ಮತ್ತು ಈಜಿಪ್ಟ್ ಸಂಸ್ಕೃತಿಗಳಿಗೂ ಪ್ರಾಚೀನವಾದ ದೂರದ ಆ ಕಾಲಘಟ್ಟದಲ್ಲಿ ಬೆಳಗಿದ ಜರತುಷ್ಟ್ರನೆಂಬ ಆ ಆಧ್ಯಾತ್ಮಿಕ ಜ್ಯೋತಿ ಇಂದಿಗೂ ಮಾನವ ಜನಾಂಗಕ್ಕೆ ದಾರಿ ತೋರಬಲ್ಲ ತೋರುದೀಪಗಳಲ್ಲಿ ಒಂದಾಗಿ ಬೆಳಗುತ್ತಿದೆ, ಪ್ರಾಪಂಚಿಕತೆಯ ಕತ್ತಲಿನಿಂದ ದಿವ್ಯತೆಯ ಬೆಳಕಿನೆಡೆಗೆ ಮಾನವ ಜನಾಂಗವನ್ನು ಕೈ ಹಿಡಿದು ಕರೆದೊಯ್ಯಬಲ್ಲ ಕರುಣಾಳುವಾದ ಬೆಳಕಾಗಿದೆ. ದಿವ್ಯತೆಯೇ ಸತ್ಯ. ಸತ್ಯವೇ ದಿವ್ಯತೆ. ಈ ಸತ್ಯವೆಂಬುದು ಅನಾದಿ ಹಾಗೂ ಅನಂತ. ಕಾಲಕಾಲಕ್ಕೆ ಸಂತ-ಮಹಾತ್ಮರು ಹುಟ್ಟಿ ಬಂದು, ಸತ್ಯದ ವಿವಿಧ ಮುಖಗಳ ಅಭಿವ್ಯಕ್ತಿಗೆ ಮಾಧ್ಯಮಗಳಾಗುತ್ತಾರೆ. ಆದರೆ, ನಿತ್ಯಸತ್ಯತತ್ತ್ವ ಅಜರಾಮರವಾಗಿ ಉಳಿಯುತ್ತದೆ. ಜರತುಷ್ಟ್ರ ಅಂತಹ ಸತ್ಯತತ್ತ್ವವಾಹಕನಾಗಿದ್ದಾನೆ. ಕೆಡುಕಿನ ಬಲವನ್ನು ನಾಶಮಾಡಿ, ಒಳಿತಿನ ಸನ್ಮಾರ್ಗದ ದಾರಿತೋರುವ ದಾರಿದೀಪವಾಗಿದ್ದಾನೆ.

(ಆಧಾರ–*Spitama Zarathushtra* by Dr. Jal K. Wadia)